

ಆತ : ನಿಮಗೆ ತುಂಬಾ ಬೇಧಿಯಂತೆ ನೋಡ್ಕೊಂಡು ಹೋಗೋಣ ಅಂತ ಬಂದೆ..

ಈತ: ಬರೋದು ಬಂದ್ರಿ ಒಂದು ಹತ್ತು ನಿಮಿಷ ಮುಂಚೆ ಬರಬಾರದಿತ್ತಾ?

ಆತ : ಏಕೆ?

ಈತ: ಹತ್ತು ನಿಮಿಷದ ಮುಂಚೆ ಬೇಧಿ ಆಯ್ತು, ಫ್ಲಷ್ ಮಾಡಿಬಿಟ್ಟೆ. ಇಲ್ದಿದ್ರೆ ನೀವು ನೋಡ್ಕೊಂಡೇ ಹೋಗಬಹುದಿತ್ತು!

★★★

ಮಂತ್ರಿ : ಎಲ್ಲಾ ಮಕ್ಕಳೂ ಹೆರಿಗೆ ಆಸ್ಪತ್ರೆಯಲ್ಲೇ ಹುಟ್ತಿದಾರೆ. ಇದಕ್ಕೆ ಏನು ಕಾರಣ ಅಂತ ಪತ್ತೆ ಮಾಡ್ರೀ..

ಶಿಷ್ಯ : ನಾನಾಗ್ಲೇ ಪತ್ತೆ ಮಾಡಿದೀನಿ ಸರ್!

ಮಂತ್ರಿ : ಹೌದಾ, ಏನು ಕಾರಣ?

ಶಿಷ್ಯ: ಎಲ್ಲಾ ಗರ್ಭಿಣಿಯರೂ ಹೆರಿಗೆ ಆಸ್ಪತ್ರೆಗೇ ಅಡ್ಮಿಟ್ ಆಗ್ತಿದಾರೆ.. ಅದಕ್ಕೆ!

★★★

ರಾಮ್: ನನಗೆ ನನ್ನ ಹೆಂಡ್ತಿ ಹೇಳೋ ಒಂದ್ ವಿಚಾರ ಅರ್ಥ ಆಗ್ತಿಲ್ಲ ಅದಕ್ಕೆ ನಿಮ್ಮನ್ನ ಕೇಳೋಣ ಅಂತ ಬಂದೆ

ಶಾಮ್: ನೀವೇ ಪರವಾಗಿಲ್ಲ, ನನಗೆ ನನ್ನ ಹೆಂಡ್ತಿ ಹೇಳೋ ಯಾವ ವಿಚಾರವೂ ಅರ್ಥ ಆಗಲ್ಲ.

★★★

ಸೀತ : ನೀನೇ ಸಂಪಾದನೆ ಮಾಡ್ತಿದ್ರೂ ಖರ್ಚಿಗೆ ನಿನ್ನ ಗಂಡನ ಹಣಾನ ಯಾಕೆ ಕೇಳ್ತೀಯಾ?

ಗೌರಿ : ಸಂಪಾದನೆನೂ ನಾವೇ ಮಾಡ್ಬೇಕು, ಖರ್ಚೂ ನಾವೇ ಮಾಡ್ಬೇಕು ಅಂದ್ರೆ ಕಷ್ಟ ಕಣೆ. ಅದಕ್ಕೆ ಸಂಪಾದನೆ ಅವರು ಮಾಡ್ಲಿ. ಖರ್ಚು ನಾನು ಮಾಡೋಣ ಅಂತ

★★★



ಗುರು : ನೀವು ನಿಮ್ಮ ಹೆಂಡ್ತಿನ ಸ್ಕೂಟರಿನಲ್ಲಿ ಕೂರಿಸ್ಕೊಂಡು ಹೋಗಿದ್ದು ಕಂಡು ನನ್ನ ಹೆಂಡ್ತಿಗೂ ಆಸೆಯಾಗಿದೆ.

ಶಿವು : ಅದಕ್ಕೇನಂತೆ, ನನ್ನ ಹೆಂಡ್ತಿ ಇಲ್ಲದಿರುವಾಗ ಅವರನ್ನೂ ಕೂರಿಸ್ಕೊಂಡು ಒಂದು ರೌಂಡು ಹೊಡೆಸ್ತೀನಿ!

– ಸುಕೇಶವ

